

ಭಾರತದ ಬೌದ್ಧ ದೇಗುಲ

ವಿರುವ ಲುಂಬಿನಿ ಅಭಿವೃದ್ಧಿ ವಲಯದ ನಟ್ಟ ನಡುವಿನಲ್ಲಿ ಮಾಯಾದೇವಿಯ ದೇವಸ್ಥಾನವಿದೆ. ದೇಗುಲದ ಸುತ್ತಲೂ ಗಿಡ ಮರಗಳಿದ್ದರೂ, ತಲೆಯ ಮೇಲೆ ಹೊಡೆಯುತ್ತಿದ್ದ ರಣ ಬಿಸಿಲಿಗೆ ಹೊರಗೆ ಹಾಸಿದ್ದ ಚಪ್ಪಡಿ ಕಲ್ಲುಗಳು ಬಾಣಲೆಯ ಹಾಗೆ ಕಾದು ನಿಂತಿದ್ದವು. ಅವುಗಳ ಮೇಲೆ ನರ್ತನ ಮಾಡಿದ ಹಾಗೆ ಹೆಬ್ಬೆರಳುಗಳನ್ನಿರಿಸಿ ಸರಸರನೆ ಒಳಗೆ ಓಡಿದೆವು. ನೇಪಾಳದಾದ್ಯಂತ ನಡೆಯುತ್ತಿದ್ದ ಗಲಾಟೆ ಮತ್ತು ಭೂಕಂಪದ ಭಯದಿಂದ ಪ್ರವಾಸಿಗರ ಸಂಖ್ಯೆ ಬೆರಳೆಣಿಕೆಯಷ್ಟಿತ್ತು.

ಗೌತಮ ಬುದ್ಧನ ತಾಯಿ ಮಹಾರಾಣಿ ಮಾಯಾದೇವಿ ಹೆರಿಗೆಗೆಂದು ಕಪಿಲವಸ್ತುವಿನಿಂದ ತನ್ನ ತಂದೆಯ ಮನೆಗೆ ಹೋಗುವಾಗ ಲುಂಬಿನಿ ವನದಲ್ಲಿ ಹೆರಿಗೆ ನೋವು ಕಾಣಿಸಿಕೊಂಡಿತಂತೆ. ಮರವೊಂದರ ಕೊಂಬೆಯನ್ನು ಹಿಡಿದುಕೊಂಡು ನಿಂತ ಮಾಯಾದೇವಿ ಯಾವುದೇ ನೋವಿಲ್ಲದೆ ಕ್ರಿಪೂ 563ರಲ್ಲಿ ವೈಶಾಖಶುದ್ಧ ಪೌರ್ಣಮಿಯ ದಿನದಂದು ಮಗುವಿಗೆ ಜನ್ಮ ನೀಡಿದಳಂತೆ. ಹುಟ್ಟಿದ ಮಗು, ಸಿದ್ಧಾರ್ಥ. 'ಇದು ನನ್ನ ಕೊನೆಯ ಪುನರ್ಜನ್ಮ' ಎಂದು ಹೇಳಿ ನಾಲ್ಕು ದಿಕ್ಕುಗಳಿಗೂ ಏಳು ಹೆಜ್ಜೆಗಳನ್ನಿರಿಸಿದನಂತೆ. ಅವನ ಪ್ರತಿ ಹೆಜ್ಜೆಗೂ ಒಂದೊಂದು ಕಮಲ ಅರಳಿದವಂತೆ.

ಮಾಯಾದೇವಿ ಹಿಡಿದುಕೊಂಡ ಸಾಲ್ ಮರದ ಬುಡ ಮತ್ತು ಪುಟ್ಟ ಬುದ್ಧನ ಹೆಜ್ಜೆಗಳನ್ನು ಶ್ವೇತವರ್ಣದ ಈ ದೇವಸ್ಥಾನದಲ್ಲಿ ಸಂರಕ್ಷಿಸಲಾಗಿದೆ. ಮರದ ಕೆಳಗೆ ಕಲ್ಲಿನ ಚಪ್ಪಡಿಯಿದ್ದು, ಅದನ್ನು ಮಾರ್ಕರ್ ಸ್ಟೋನ್ ಎಂದು ಗುರುತಿಸಿ, ಸುತ್ತಲೂ ಗಾಜಿನ ಪೆಟ್ಟಿಗೆಯನ್ನಿರಿಸಿ ಕಾಪಾಡಲಾಗಿದೆ. ಜನರು ಅದರೊಳಗೆ ಭಕ್ತಿಯಿಂದ ಹೂವು ಮತ್ತು ಹಣವನ್ನು ಹಾಕುವುದನ್ನು ನೋಡಿ, ನಾವೂ ಅದರೊಳಗೆ ಹಣವನ್ನು ಹಾಕಿದೆವು. ಪುರಾತತ್ವ ಇಲಾಖೆಯವರು ದೇವಾಲಯದ ಒಳಗೆ ಹಳೆಯ ಕಟ್ಟಡದ ಅವಶೇಷಗಳನ್ನು ಹೊರತೆಗೆದಿದ್ದಾರೆ. ಮೌರ್ಯರ ಕಾಲದಲ್ಲಿದ್ದ ಕಟ್ಟಡದ ಇಟ್ಟಿಗೆಗಳು ದೊರಕಿದ್ದು, ಶತಶತಮಾನಗಳಿಂದಲೂ ಬೌದ್ಧರು ಮಾಯಾದೇವಿಯ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುತ್ತಿದ್ದುದು ಬೆಳಕಿಗೆ ಬಂದಿದೆ.

## ಬುದ್ಧ ಸ್ನಾನ ಮಾಡಿದ ಪುಷ್ಕರಣಿ:

ದೇವಾಲಯದ ಹೊರಗಿರುವ ಪುಷ್ಕರಣಿಯಲ್ಲಿ ಮಾಯಾದೇವಿ ಸ್ನಾನ ಮಾಡಿ 25 ಹೆಜ್ಜೆಗಳನ್ನಿಟ್ಟ ಮೇಲೆ ಹೆರಿಗೆ ನೋವು ಕಾಣಿಸಿಕೊಂಡಿತಂತೆ. ಹೆರಿಗೆಯಾದ ಮೇಲೆ ಪುಟ್ಟ ಬುದ್ಧನಿಗೆ ದೇವತೆಗಳು ಈ ಪುಷ್ಕರಣಿಯಲ್ಲಿ ಸ್ನಾನ ಮಾಡಿಸಿದರಂತೆ. ಆ ಪುಷ್ಕರಣಿಯ ಬಳಿಯಿರುವ ಬೋಧಿ ವೃಕ್ಷದ ಸುತ್ತಲೂ ಹಲವು ಬೌದ್ಧ ಸನ್ಯಾಸಿಗಳು ಮಂತ್ರ ಪಠಿಸುತ್ತಿದ್ದರು. ಅರಳಿಮರಕ್ಕೆ ಕಟ್ಟಲಾಗಿದ್ದ ನೂರಾರು ಪ್ರಾರ್ಥನಾ ಧ್ವಜಗಳು ಗಾಳಿಯಲ್ಲಿ ಹಾರಾಡುತ್ತ, ಸನ್ಯಾಸಿಗಳ ಮಂತ್ರಗಳನ್ನು ಸುತ್ತಲೂ ಪಸರಿಸುವ ಕಾರ್ಯದಲ್ಲಿ ಮಗ್ನವಾಗಿದ್ದವು.

ಅಶೋಕ ಸ್ಥಂಭ: ಮಾಯಾದೇವಿಯ ದೇವಸ್ಥಾನದ ಹೊರಗೆ ಅಶೋಕ ಸ್ಥಂಭವೊಂದಿದ್ದು ಮೌರ್ಯ ದೊರೆ ಅಶೋಕ, ಬುದ್ಧನ ಜನ್ಮ ಸ್ಥಳವಾದ ಲುಂಬಿನಿಗೆ ಭೇಟಿ ನೀಡಿದ ಬಗ್ಗೆ ವಿವರಣೆ ನೀಡುತ್ತದೆ. ಪೊಲೀಸ್ ಅಧಿಕಾರಿ ನಮ್ಮನ್ನು ಸ್ಥಂಭದ ಬಳಿ ನಿಲ್ಲಿಸಿ, ಅದಕ್ಕೆ ಹಾಕಲಾಗಿದ್ದ ಮಂತ್ರಗಳ ಬಟ್ಟೆ ತುಂಡೊಂದನ್ನು ನಮ್ಮ ಮಗನ ಕೊರಳ ಸುತ್ತ ಹಾಕಿ ಹುಟ್ಟುಹಬ್ಬಕ್ಕೆ ಶುಭ ಹಾರೈಸಿದರು.

'ಲುಂಬಿನಿ ಅಭಿವೃದ್ಧಿ ಟ್ರಸ್ಟ್‌ನ ಚೇರ್ಮನ್ ರಾಜಕುಮಾರ ಗ್ಯಾನೇಂದ್ರ ಬೀರ್ ಬಿಕ್ರಂ ಶಾ ಅಂತಾರಾಷ್ಟ್ರೀಯ ಶಾಂತಿ ವರ್ಷವಾದ 1986ರಲ್ಲಿ ನವೆಂಬರ್ 1ರಂದು ಈ ಶಾಂತಿ ಜ್ಯೋತಿಯನ್ನು ಹೊತ್ತಿಸಿದರು' ಎಂದು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಲಾಗಿತ್ತು. ಶಾಂತಿ ಜ್ಯೋತಿಯ ಎದುರಿಗೆ ಪುಟ್ಟ